

ಡಾ.ವಿನೋದ ಛೆಬ್ಬಿ

ಬೇಡಿಬಯಸಿ ಮದುವೆಯಾಗಿದ್ದರೆ ಮದುವೆಯಾಗೇ ಇರುತ್ತೀರಿ ಎಂದರ್ಥವೇ ವಿನಾ ಸುಖವಾಗಿರುತ್ತೀರಿ ಎಂದರ್ಥವಲ್ಲ!

# ಸುಖದಲ್ಲೂ ಸಂಕಷ್ಟ ಹೇಗೆ?

5

ಸಂಗಾತಿಯನ್ನು ಆರಿಸಿಕೊಳ್ಳುವಾಗ ಸಮಸ್ಯೆಗಳನ್ನೂ ಹೇಗೆ ಆರಿಸಿಕೊಳ್ಳುತ್ತೇವೆ ಎಂದು ಹೋದಸಲ ಕಂಡುಕೊಂಡೆವು. ಇಷ್ಟರಲ್ಲೇ ಕೆಲವರು ಇದಕ್ಕೆ ಆಕ್ಷೇಪಣೆ ಎತ್ತಿದ್ದಾರೆ. ಇದು ಪ್ರೇಮವಿವಾಹದಲ್ಲಿ ಇರಬಹುದು, ಆದರೆ ಹಿರಿಯರಿಂದ ನಿಶ್ಚಯವಾದ ವಿವಾಹಗಳಲ್ಲಿ ಹೀಗೆ ನಡೆಯುವುದಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿಯೆಂದು ಈ ಪ್ರಕರಣದ ಮೂಲಕ ತಿಳಿಯೋಣ.

ನಾನು ಸಾರ್ವಜನಿಕರಿಗಾಗಿ ನಡೆಸುತ್ತಿದ್ದ ದಾಂಪತ್ಯ ಚಿಕಿತ್ಸೆಯ ಕಾರ್ಯಾಗಾರ ಒಂದರಲ್ಲಿ ಭಾಗವಹಿಸಿದ್ದರು ಸುಲಭಾ ಹಾಗೂ ಸತೀಶ್ (ಪ್ರಕರಣ ನಿಜ, ಹೆಸರುಗಳು ಕಾಲ್ಪನಿಕ). ಅವರದು ಹಿರಿಯರು ನಿಂತು ಮಾಡಿಸಿದ ವಿವಾಹ. ಅದಾಗಿ ಒಂದು ವರ್ಷ ಪೂರ್ತಿಯಾಗಿಲ್ಲ, ಈಗಲೇ ತಕರಾರು ಹೊಗೆಯಾಡುತ್ತಿದೆ. ಮೊದಲು ತನ್ನ ಕಡೆಗೆ ಗಮನ ಕೊಡುತ್ತಿದ್ದ ಪತಿ ಈಗ ತನ್ನನ್ನು ಕಡೆಗಣಿಸುತ್ತಿದ್ದಾನೆ, ಉಚಾಯಿಸಿ ಮಾತಾಡುತ್ತಿದ್ದಾನೆ ಎಂದು ಸುಲಭಾ ತಕರಾರು ಮಾಡುತ್ತಿದ್ದಾಳೆ. ಕಾರ್ಯಾಗಾರದಲ್ಲಿ ಹೊರಬಂದ ವಿಷಯ ಇದು: ಸುಲಭಾ ಏಕೈಕ ಸಂತಾನವಾದರೂ ತನ್ನ ಅಪ್ಪನಿಂದ ತಿರಸ್ಕೃತಳಾಗಿ ಬೆಳೆದಿದ್ದಾಳೆ. ಯಾಕೆ? ಸಂಪ್ರದಾಯಶರಣನಾದ ಆತನಿಗೆ ಗಂಡುಸಂತಾನದಿಂದಲೇ ವಂಶೋದ್ಧಾರ ಎಂಬ ನಂಬಿಕೆ. ಸುಲಭಾ ತನ್ನ ಶೈಶವದಲ್ಲಿ ಅಪ್ಪನ ನಿಕಟ ಭಾವಸಂಪರ್ಕಕ್ಕಾಗಿ ಸಾಕಷ್ಟು ಹಟಮಾಡಿ, ಅಲ್ಪಸ್ವಲ್ಪ ಪಡೆದುಕೊಂಡೂ ಇದ್ದಾಳೆ. (ಹಿರಿಯರು ಶಿಶುಗಳಿಗೆ ನೀಡುವ ನಿಕಟ ಭಾವಸಂಪರ್ಕದ ಆಳಾವಧಿಯನ್ನು ಅನುಸರಿಸಿ ಶಿಶುಗಳು ಭದ್ರತಾಭಾವ, ಆತಂಕ, ಅಥವಾ ಭಯಭಾವದ ವ್ಯಕ್ತಿತ್ವವನ್ನು ನಿರೂಪಿಸಿಕೊಳ್ಳುತ್ತವೆ. ಇದಕ್ಕೆ ಇಂಗ್ಲಿಷ್‌ನಲ್ಲಿ **attachment style** ಎಂದು ಹೆಸರಿದೆ. ಈ ಬಗ್ಗೆ ಇನ್ನೊಮ್ಮೆ ನೋಡೋಣ) ಹೀಗಾಗಿ, ಸ್ವಲ್ಪ ಸಿಗಬೇಕಾದರೂ ಹೆಚ್ಚು ಹಟ ಮಾಡಬೇಕೆಂದು ಭಾವನಿರ್ಧಾರ ಮಾಡಿದ್ದಾಳೆ. ಇಲ್ಲಿ ಭಾವನಿರ್ಧಾರ ಎಂದರೇನು ಎಂದು ಸ್ವಲ್ಪ ವಿವರಿಸುತ್ತೇನೆ:

ಒಂದು ವರ್ಷದ ಅಪರಿಚಿತ ಮಗುವಿಗೆ ಆಟಿಕೆಯ ಆಮಿಷ ಒಡ್ಡುತ್ತ ನಿಮ್ಮೆಡೆಗೆ ಸೆಳೆಯಲು ನೋಡುತ್ತೀರಿ ಎಂದುಕೊಳ್ಳಿ. ಆಗ ಅದು ಒಲ್ಲೆಂದು ಮುಖ ತಿರುಗಿಸಿಕೊಂಡು ಅಮ್ಮನನ್ನು ತಬ್ಬಿಕೊಳ್ಳುತ್ತದೆ. ಮಗು ತನ್ನ ಪ್ರತಿಕ್ರಿಯೆಯನ್ನು ತನಗೆ ಆಟಿಕೆ ಬೇಕೋ ಅಥವಾ ಬೇಡವೋ ಎಂಬ ತರ್ಕವನ್ನು ಆಧರಿಸಿ ನಿರ್ಧರಿಸುವುದಿಲ್ಲ. ಬದಲಾಗಿ ಅಪರಿಚಿತರಾದ ನಿಮ್ಮ ಮೂಲಕ ತನ್ನೊಳಗೆ ಹುಟ್ಟುವ ಅಭದ್ರತೆಯ ಭಾವನೆಗೆ ಓಗೊಟ್ಟು ನಿರ್ಧಾರ ಕೈಗೊಳ್ಳುತ್ತದೆ. ಹೀಗೇಕೆ? ಮಗುವಿಗೆ ಸುಮಾರು ಎರಡೂವರೆ ವರ್ಷದ ತನಕ ತರ್ಕಬುದ್ಧಿ ಹುಟ್ಟಿರುವುದಿಲ್ಲ. ಆಗ ಅದರೊಳಗೆ ಹುಟ್ಟುವ ತಕ್ಷಣದ ಭಾವನೆಗಳೇ ದಿಢೀರ್ ಪ್ರತಿಕ್ರಿಯೆಗೆ ಪ್ರಚೋದಿಸುತ್ತವೆ. ದೊಡ್ಡವರು ನಾವೂ ಕೆಲವೊಮ್ಮೆ ಹಾಗೇ ವರ್ತಿಸುತ್ತೇವೆ. ಯಾರಾದರೂ ನಮ್ಮನ್ನು ತಮಾಷೆಗೆ ಹೆದರಿಸಿದಾಗ ತರ್ಕ ಕೆಲಸ ಮಾಡದೆ ಬೆಚ್ಚಿಬಿದ್ದು ನಡುಗಿ ಅವರ ಮೇಲೆ ರೇಗುತ್ತೇವಲ್ಲ, ಇದೆಲ್ಲ ಭಾವನಿರ್ಧಾರ.

ಸುಲಭಾ ತನ್ನ ಶೈಶವದಲ್ಲಿ ಅಪ್ಪನಿಂದ ಸಿಗದ ನಿಕಟ ಸಂಪರ್ಕವನ್ನು ದಾಂಪತ್ಯದಲ್ಲಿ ಗಂಡನ ಮೂಲಕ ಪಡೆದುಕೊಳ್ಳುವ ಭಾವನಿರ್ಧಾರ ಮಾಡಿದ್ದಾಳೆ. ಅದಕ್ಕೆಂದೇ ತನ್ನ ಅಪ್ಪನ (ಸ್ವಭಾವದ) ಹೋಲಿಕೆಯಿರುವ, ಸ್ವಲ್ಪ ಧಡೂತಿಯೇ ಎನ್ನಬಹುದಾದ, ಗಂಭೀರ ಮುಖಭಾವ ಹೊಂದಿದ ಸತೀಶನನ್ನು ಆಯ್ಕೆ ಮಾಡಿದ್ದಾಳೆ. ಹಾಗಾಗಿ ಆತ ತನಗಿಂತ 12 ವರ್ಷ ಹಿರಿಯನಾಗಿ ಅರಸಿಕನಾಗಿದ್ದು ಸಂಪ್ರದಾಯವಾದಿ ಆಗಿರುವುದು ಅವಳಿಗೇನೂ ಅನ್ನಿಸಿಲ್ಲ. ವಾಸ್ತವವಾಗಿ ಒಬ್ಬ ಹಿರಿಯ ವ್ಯಕ್ತಿ ತನ್ನನ್ನು ಇಡಿಯಾಗಿ ಮೆಚ್ಚಿಕೊಂಡಿರುವುದೇ ಆಕೆಗೆ ಮುದತರುವ ವಿಚಾರ. ಕೆಲವು ದಿನ ಪತಿಯ ಸಹವಾಸದಲ್ಲಿ ತನ್ನ ಸುಪ್ತಮನದಲ್ಲಿ ಸುಡುತ್ತಿರುವ ತಿರಸ್ಕೃತ ಭಾವಕ್ಕೆ ತಂಪೆರೆದಿದ್ದಾಳೆ.

ಕ್ರಮೇಣ ಸತೀಶ ವ್ಯಾವಹಾರಿಕ ಕಾರಣಗಳಿಂದ ಮಾತು ಕಡಿಮೆ ಮಾಡಿದಾಗ ಅದನ್ನು ತನ್ನಪ್ಪ ನಿರ್ಲಕ್ಷಿಸುತ್ತಿದ್ದ ಭಾವನೆಯೊಂದಿಗೆ ಸಮೀಕರಿಸಿ ಕೆರಳಿ, ಭಾವನಿರ್ಧಾರದಿಂದ ಅವನನ್ನು ತರಾಟೆಗೆ ತೆಗೆದುಕೊಂಡಿದ್ದಾಳೆ.

ಇಲ್ಲಿ ಗಮನಾರ್ಹ ಅಂಶವೇನೆಂದರೆ, ಆಕೆ ಎಲ್ಲ ಬಿಟ್ಟು ತನ್ನಪ್ಪನ ಹೋಲಿಕೆಯಿರುವ ಅವನನ್ನು ಯಾಕೆ ಒಪ್ಪಿಕೊಂಡಳು? ತನ್ನನ್ನು ತಿರಸ್ಕರಿಸಿದ್ದಕ್ಕಾಗಿ ಅಪ್ಪನನ್ನು ಎದುರಿಸಿ, ತನಗೆಷ್ಟು ನೋವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಲು ಅವಕಾಶ ಆಗಿಲ್ಲ. ಹಾಗಾಗಿ ಅಪ್ಪನಂತಿರುವ ಗಂಡನ ಮೇಲೆ ಇದನ್ನೆಲ್ಲ ಹಾಯಿಸಿ ಅನ್ನಬಹುದು. ಇದೂ ಅವಳ ಅಪ್ರಜ್ಞಾಪೂರ್ವಕ ಭಾವನಿರ್ಧಾರ!

ಇನ್ನು ಸುಲಭಾಳ ಗಂಡ ಸತೀಶ ಕೂಡ ಅಷ್ಟೆ. ಆತನ ತಾಯಿ ಸಂಪ್ರದಾಯಸ್ಥೆ. ಮಗನನ್ನು ತನ್ನ ಕೈಯೊಳಗೆ ಸದಾ ಇಟ್ಟುಕೊಳ್ಳುವುದಕ್ಕಾಗಿ ತನಗೆ ಗೊತ್ತಿರುವ ಹಾಗೂ ಅವನು ಪ್ರಶ್ನಿಸಲಾಗದಿರುವ ಸಂಪ್ರದಾಯ ಎನ್ನುವ ಸಿದ್ಧಾಂತವನ್ನು ಅಪ್ರಜ್ಞಾಪೂರ್ವಕ ಆರಿಸಿಕೊಂಡು ಮಗನ ಮೇಲೆ ಹೇರಿದ್ದಾಳೆ. ಸತೀಶ ಮೊದಲು ತಾಯಿಯ ಪ್ರಭಾವಕ್ಕೆ ಒಳಗಾಗಿ ಅನುಸರಿಸಿದರೂ ಬೆಳೆದಂತೆ ಆಗಾಗ ಅದರ ವಿರುದ್ಧ ಬಂಡಾಯ ಎದ್ದಿದ್ದಾನೆ. ಈ ತುಮುಲವೇ ಅವನ ಮುಖದ ಮೇಲೆ ಗಾಂಭೀರ್ಯದ ರೂಪದಲ್ಲಿ ವ್ಯಕ್ತವಾಗುತ್ತಿದೆ. ಮದುವೆಯಾದ ಕೆಲವು ದಿನಗಳ ನಂತರ ಕಾಣಿಸಿಕೊಂಡ ಹೆಂಡತಿಯ ಹಟಮಾರಿತನವು ಅವನ ಮನಸ್ಸಿನ ವಿರುದ್ಧ ಅವನ ಮೇಲೆ ಅಧಿಕಾರ ಸ್ಥಾಪನೆ ಮಾಡುವಂತೆ ಅನ್ನಿಸಿದೆ. ಹೆಂಡತಿಯ ಈ ಪ್ರಯತ್ನವು ತನ್ನನ್ನು ಕೈಯಲ್ಲಿಟ್ಟುಕೊಳ್ಳುವ ಹವಣಿಕೆಯೆಂದು ತಿಳಿದು ಅವಳನ್ನು ಅಲಕ್ಷಿಸಿದ್ದಾನೆ. ಅಂದರೆ ತಾಯಿಯನ್ನು ತಿರಸ್ಕರಿಸಲು ಆಯ್ಕೆಯಿಲ್ಲದವನು ಅಪ್ರಜ್ಞಾಪೂರ್ವಕ ಹೆಂಡತಿಯನ್ನು ಆಯ್ಕೆಮಾಡಿಕೊಂಡು ಅವಳನ್ನು ತಿರಸ್ಕರಿಸುತ್ತಿದ್ದಾನೆ!

ಪ್ರೇಮವಿವಾಹಗಳಲ್ಲಷ್ಟೇ ಅಲ್ಲ, ಹಿರಿಯರು ಏರ್ಪಡಿಸಿದ ವಿವಾಹದಲ್ಲೂ ಕೂಡ ಇಂಥದ್ದೇ ಕ್ರಮ ಎದ್ದುಕಾಣುತ್ತದೆ ಎಂದು ಸ್ಪಷ್ಟವಾಯಿತಲ್ಲ? ಹಿರಿಯರು ಒಪ್ಪಿದ್ದು ತಮಗೂ ಒಪ್ಪಿಗೆ ಎಂದು ಉತ್ಸಾಹದಿಂದ ಮದುವೆಯಾದರೂ ನಂತರ ಸಂಗಾತಿಯೊಡನೆ ಸಲ್ಲದ ದೋಷಗಳನ್ನು ಹುಡುಕುವ ಕಾರಣ ಇದು! ಇನ್ನು, ಮನಸ್ಸಿಲ್ಲದೆ ಒತ್ತಾಯಕ್ಕೊಳಗಾಗಿ ಮದುವೆಯಾದರಂತೂ ಮುಗಿಯಿತು, ಬೈದುಕೊಳ್ಳಲು ಎರಡೂ ಕಡೆ ಸಾಕಷ್ಟು ಜನ ಸಿಗುತ್ತಾರೆ. ಯಾಕೆ? ಮದುವೆ ನಿರಾಕರಿಸಿದರೆ ಹಿರಿಯರಿಂದ ಉಂಟಾಗಬಹುದಾದ ತೊಂದರೆಗಳನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಇಷ್ಟವಿಲ್ಲದ ದಾಂಪತ್ಯಕ್ಕೆ ಕಾಲಿಟ್ಟಾಗಿದೆ – ಹೊಂದಾಣಿಕೆ, ಸುಧಾರಣೆ ಯಾರಿಗೆ ಬೇಕು? ಅನುಭವಿಸುವುದೊಂದೇ ಬಾಕಿ!

ನಾವೆಲ್ಲ ನಮಗೆ ಬೇಕಾದ ಗುಣಗಳುಳ್ಳ ವ್ಯಕ್ತಿಯನ್ನು ಆಯ್ಕೆ ಮಾಡುವುದರ ಜತೆಗೆ ನಮಗೆ ಬಗೆಹರಿಯದ ಕೆಲವು ಸಮಸ್ಯೆಗಳನ್ನೂ ಆರಿಸಿಕೊಂಡು, ಅವುಗಳನ್ನು ಬಗೆಹರಿಸಿಕೊಳ್ಳಲು ಬದ್ಧಸಂಗಾತಿಯ ಜೊತೆಗೆ ಏಗುವ (ವ್ಯರ್ಥ)ಪ್ರಯತ್ನವನ್ನು ಮುಂದೆ ಮೂವತ್ತು ನಲವತ್ತು ವರ್ಷ ಕೈಗೊಳ್ಳುತ್ತೇವೆ!

ಇಂಥ ಕಷ್ಟಗಳು ಬರಬಹುದು ಎಂದು ಮುಂಚೆಯೇ ಗೊತ್ತಿದ್ದರೆ ನಾನು ಮದುವೆ ಆಗುತ್ತಲೇ ಇರಲಿಲ್ಲ ಎಂದು ಕೆಲವರು ಉದ್ಗರಿಸುವಾಗ ನಾನು ಅವರಿಗೆ ಕೇಳುವ ಪ್ರಶ್ನೆ ಇದು: ಇಂಥ ಕಷ್ಟಗಳು ಬರಲೇಬಾರದು ಎಂದು ನೀವು ಅಂದುಕೊಳ್ಳಲು ಕಾರಣ ಏನು? ಕಷ್ಟಗಳಿಲ್ಲದೆ ಬರೀ ಸುಖವೇ ಇರುತ್ತದೆ ಎಂದು ಅಂದುಕೊಳ್ಳುವುದರ ಹಿನ್ನೆಲೆ ಏನು?

ತಾತ್ಪರ್ಯ ಇಷ್ಟೆ: ಮದುವೆ ಆಗಿದ್ದರೆ ಮದುವೆಯಾಗಿರುತ್ತೀರಿ ಎಂದರ್ಥವೇ ವಿನಾ ಸುಖವಾಗಿರುತ್ತೀರಿ ಎಂದರ್ಥವಲ್ಲ! ಹಾಗಾದರೆ ದಾಂಪತ್ಯ ವಿರಸಕ್ಕೆ ಕೊನೆ ಇಲ್ಲವೆ? ಡುಂಡಿರಾಜ್ ಹೇಳಿದಂತೆ 'ನೀರ ಸಾಗರ ದಾಟಲು ತೆಪ್ಪ ಇರಬೇಕು, ಸಂಸಾರ ಸಾಗರ ದಾಟಲು ತೆಪ್ಪಗಿರಬೇಕು' ಎನ್ನುವುದೇ ಕೊನೆಯ ಮಾತೆ?

ಈ ಸಂದರ್ಭದಲ್ಲಿ ನನ್ನ ಬಾಲ್ಯದಲ್ಲಿ ಕೇಳುತ್ತಿದ್ದ ಕಥೆಗಳು ನೆನಪಿಗೆ ಬರುತ್ತಿವೆ. ಕಥಾನಾಯಕ–ನಾಯಕಿಯರಿಗೆ ಎಷ್ಟೇ ಕಷ್ಟಕೋಟಲೆ ಬಂದರೂ ಕೊನೆಯಲ್ಲಿ ಮದುವೆಯಾಗಿ ಸುಖವಾಗಿದ್ದರು ಎಂದು ಮುಕ್ತಾಯವಾದರೇ ಸಮಾಧಾನ! ಇಲ್ಲದಿದ್ದರೆ ಸುಖಾಂತವಾಗುವ ತನಕ ನಾನು ಕಥೆ ಹೇಳುವವರನ್ನು ಬಿಡುತ್ತಿರಲಿಲ್ಲ!

ಇಂಥದ್ದೇ ಹಟದಿಂದ ಮುಂದುವರಿದರೆ ದಾಂಪತ್ಯ ಸುಖಾಂತವಾಗಬಹುದೆ? ಇದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

[ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ಲೇಖಕರ ವಿಳಾಸ: .www.medisex.org]